# ಮನೆ ಆಟ



■ ಎಸ್. ಶೇಷಾದ್ರಿ ಕಿನಾರ

ಮುಕುಂದರಾಯರಿಗೆ ಇದ್ದಕ್ಕಿದ್ದ ಹಾಗೆ ತಮ್ಮ ಮನೆಯ ದಾರಿ ಮರೆತುಹೋಯಿತು. ಆಗ ಸೂರ್ಯ ನಡು ನೆತ್ತಿಯ ಮೇಲಿದ್ದ. ಅವರು ಸರ್ಕಲಿನ ನಡುವೆ ಸಿಕ್ಕಿಕೊಂಡಿದ್ದರು. ಅದೊಂದು ದೊಡ್ಡ ಸರ್ಕಲ್. ನಾಲ್ಕು ದಿಕ್ಕಿನಲ್ಲಿ ನಿಂತ ವಾಹನಗಳು. ಅವಕ್ಕೆ ದಾರಿ ತೋರುವ ಪೊಲೀಸ್. ಅವಸರ ಪಡುವ ವಾಹನಗಳು. ಹಾರನ್ ಬಾರಿಸುವರು, ಬೆಲ್ ಮಾಡುವರು, ಲಾಟರಿ ಟಿಕೆಟ್ ಮಾರುವವ, ನುಸಿ ಗುಳಿಗೆ ಮಾರುವವನು, ಎಲ್ಲಾ ಕಡೆ ಸದ್ದು. ಮುಕುಂದರಾಯರಿಗೆ ದಿಕ್ಕೇ ತೋಚದಂತಾಗಿ ಎಲ್ಲಾ ದಿಕ್ಕುಗಳು ಒಂದೇ ಆಗಿ ತಾನು ಹೊರಟದ್ದೆಲ್ಲಿಂದ, ಯಾವ ದಿಕ್ಕಿಗೆ ನಡೆಯಬೇಕು ಎಂಬುದೇ ಇತ್ಯರ್ಥವಾಗಲಿಲ್ಲ.

ಕೈಲಿ ಒಂದು ಬ್ಯಾಗು. ಜೇಬಲ್ಲಿ ದಿನಸಿ ಸಾಮಾನಿನ ಪಟ್ಟಿ. ತಮ್ಮ ಕಾಯಂ ಅಂಗಡಿ ಸಿಕ್ಕಿರಲಿಲ್ಲ. ಅಲ್ಲಿಗಾದರು ಹೋದರೆ, ಮುಂದಿನ ದಾರಿ ಸಲೀಸಾಗಬಹುದು ಎಂದುಕೊಂಡರೆ, ಆ ಅಂಗಡಿ ಎಲ್ಲಿದೆ ಎಂಬುದೇ ನೆನಪಿಗೆ ಬರಲಿಲ್ಲ. ಅದರ ಅಕ್ಕ ಪಕ್ಕ ಯಾವ ಅಂಗಡಿಗಳಿದ್ದವು ಎಂದು ನೆನಪು ಮಾಡಿಕೊಳ್ಳಲು ನೋಡಿದರೆ, ನೆನಪಾಗಲಿಲ್ಲ. ಎದುರಿಗೆ ಒಂದು ಮರ ಕಾಣಿಸಿತು. ಅಲ್ಲಿ ಕೊಡೆ ರಿಪೇರಿ ಮಾಡುವಾತ ಕೂತುಕೊಂಡಿದ್ದ. ಕೊಡೆ ರಿಪೇರಿ ನಡೆಯುತ್ತಿತ್ತು. ಬಿಸಿಲು ಸುರಿಯುತ್ತಿತ್ತು. ತಮ್ಮ ಕೊಡೆ ಬಿಡಿಸಲು ನೋಡಿದರೆ, ಕೊಡೆ ಇರಲಿಲ್ಲ. ಮನೆಬಿಟ್ಟಾಗ ಕೊಡೆ ಇತ್ತು. ಈಗ ಇಲ್ಲ. ಮೊದಲು ಬ್ಯಾಂಕಿಗೆ ಹೋದೆ, ಅಲ್ಲಿಂದ 'ಅತಿಥಿ ಸತ್ಕಾರ್'ನಲ್ಲಿ ಕಾಫಿ ಕುಡಿದೆ. ಹಾಗಾದರೆ ಕೊಡೆ ಅಲ್ಲೇ ಉಳಿಯಿತೆ? ಅದೇ ದಾರಿಯಲ್ಲಿದ್ದ ಹೋಟೆಲಿಗೆ ಬಂದರು. ಅಲ್ಲಿ ತಾವು ಕೂತಿದ್ದ ಜಾಗದಲ್ಲಿ ಅದೇ ಮೂಲೆಯ ಕಾಯಂ ಜಾಗದಲ್ಲಿ ತಮಗಿಂತ ವಯಸ್ಸಾದ ಮುದುಕರೊಬ್ಬರು ಕೂತಿದ್ದರು. ಅವರ ಪಕ್ಕ ಒಂದು ವಾಕಿಂಗ್ ಸ್ಟಿಕ್. ಅದರ ತಳಕ್ಕೆ ಖಾಲಿ ನಸ್ಯದ ಡಬ್ಬಿಯನ್ನು ಬಡಿದ್ದಿದ್ದರು – ಕೋಲು ಸವೆಯದಿರಲಿ ಎಂದು. ಮುಕುಂದರಾಯರು ಅವರ ಬಳಿ ಬಂದದ್ದೇ ಅವರು ಗಾಬರಿಯಾದರು. ಬೇಗ ಕೋಲು ತೆಗೆದುಕೊಂದು ಮಗುವಿನಂತೆ ಅವುಚಿಕೊಂಡರು. ಮತ್ತಲ್ಲೇ ಇಟ್ಟರು.

'ನನ್ನ ಕೋಡೆ ನೋಡಿದಿರಾ? ನನ್ ಕೂಡೆ' ಎಂಬ